ಹೋಗುತ್ತಾರೆ. ಅವರು ಅಲ್ಲಿ ಏನು ಗೊಂದಲವುಂಟಾಗಿದೆ ಎಂಬುದನ್ನು ವಿಚಾರ ಮಾಡುತ್ತಾರೆ. ಅವರ ವರದಿ ಬಂದ ತಕ್ಷಣ ಸಾಧ್ಯವಾದ ಮಟ್ಟಿಗೂ ನಾಳೆ ಒಂದು ಹೇಳಿಕೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅವರಿಂದ ವಿಚಾರ ತಿಳಿಯದೆ ನಾನು ಇಲ್ಲಿ ಸಭೆಗೆ ಏನು ತಿಳಿಸಲಿ ?

ಅಧ್ಯಕ್ಷರು : ತಿವಮೊಗ್ಗದಿಂದ ಉತ್ತರ ಬಂದ ಕೂಡಲೆ ಆ ರೀತಿ ಮಾಡಿ

(ii) A Minister involved in a murder case

ಶ್ರೀ ಎಂ. ಎಸ್. ಕೃಷ್ಣನ್ :—ಮಾನ್ಯ ಅಧ್ಯಕ್ಷರೇ, ನಾನು ರೂಲ್ 312ರ ಕೆಳಗೆ ಎಂದು ನೋಟೀಸನ್ನು ಕೊಟ್ಟಿದ್ದೆ. ಒಂದು ಮರ್ಡರ್ ಕೇಸಿನಲ್ಲಿ ಇಲ್ಲಿಯ ಒಬ್ಬ ಮಂತ್ರಿಗಳು ಇನ್‌ವಾಲ್ವ್ ಆಗಿದ್ದಾರೆ.

ಅಧ್ಯಕ್ಷರು:—ನಾನು ಅದನ್ನು ಪರಿಶೀಲನೆ ಮಾಡಿದೆ. ಅದು ಸಬ್‌ಜುಡೀಸ್ ಆಗುತ್ತದೆ ಆದರೆ ಸಭೆಯಲ್ಲಿ ಮುಖ್ಯ ಮಂತ್ರಿಗಳಿದ್ದಾಗ ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳಬಹುದು. ಅವರು ತಮಗೆ ಉತ್ತರ ಕೊಡುತ್ತಾರೆ.

(iii) Tenders for cutting forests in Sorab Taluk

ಶ್ರೀ ಎಸ್. ಬಂಗಾರಪ್ಪ :—ಮಾನ್ಯ ಅಧ್ಯಕ್ಷರೇ, ರೂಲ್ 312ರ ಕೆಳಗೆ ನಾನೂ ಮತ್ತು ಶ್ರೀಗಳಾದ ಲಿಂಗಪ್ಪನವರು ಮತ್ತು ತಿಮ್ಮಪ್ಪನವರೂ ರುಜು ಮಾಡಿ ಒಂದು ನೋಟೀಸನ್ನು ತಮ್ಮ ಕಡೆಗೆ ಇಲ್ಲಿಗೆ 4 ದಿನಗಳ ಕೆಳಗೆ ಸೊರಬಾ ತಾವ್ಲೂಕಿನಲ್ಲಿ ಕೂಡಕಳ್ಳಿ ಮತ್ತು ತೆಕ್ಕೂರು ಗ್ರಾಮಗಳ ಹತ್ತಿರ ಇರತಕ್ಕ ಅರಣ್ಯ ವನ್ನು ಕಡಿಯುವುದಕ್ಕಾಗಿ ಸರ್ಕಾರದವರು ಟೆಂಡರನ್ನು ಕರೆದಿದ್ದಾರೆ. ಅದನ್ನು ತಡೆಗಟ್ಟ ತಕ್ಕ ವಿಚಾರದಲ್ಲಿ. . .

ಅಧ್ಯಕ್ಷರು :—ಅದನ್ನು ಸಾಧ್ಯವಾದರೆ ನೋಡಿ ನಾಳೆಯೇ ಅಜೆಂಡಾದಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Fasting by the Councillors in Shikaripur

ಶ್ರೀ ಕೆ. ಯಂಕಟಪ್ಪ.—ಮಾನ್ಯ ಅಧ್ಯಕ್ಷರೇ ಆ ಶಿರಾಳಕೊಪ್ಪದಲ್ಲಿ ಪುರಸಭಾ ಧ್ಯಕ್ಷರ ದೌರ್ಜನ್ಯ ಜಾಸ್ತಿಯಾಗಿ ಅಲ್ಲಿನ ಕೌನ್ಸಿಲರುಗಳು ಉಪವಾಸ ಸತ್ಯಾಗ್ರಹ ಮಾಡಿರುವುದನ್ನು ತಡೆಗಟ್ಟ ತಕ್ಕ ಬಗ್ಗೆ ಸರಕಾರದವರಿಂದ ನನಗೆ ಕೂಡಲೆ ಒಂದು ಭರವಸೆಯನ್ನು ಕೊಡಿಸಬೇಕು. ಅವರಲ್ಲಿ ಒಬ್ಬರು ಆಗಲೇ ಆಸ್ಪತ್ರೆಯಲ್ಲಿ ಸೇರಿದ್ದಾರೆ.....

ಶ್ರೀ ಡಿ. ಕೆ. ನಾಯ್ಕರ್.—ನನಗೆ ಜಿಲ್ಲಾಧಿಕಾರಿಗಳಿಂದ ಉತ್ತರ ಬಂದ ಕೂಡಲೇ ಈ ವಿಚಾರದಲ್ಲಿ ನಾನು ಯೋಗ್ಯ ತನಿಖೆಗೆ ಕ್ರಮ ಕೈಗೊಳ್ಳುತ್ತೇನೆಂದು ಆಗಲೇ ಹೇಳಿದ್ದೇನೆ. ಇದಕ್ಕೂ ಹೆಚ್ಚು ನಾನು ಏನು ಹೇಳಲಿ ?

ಅಧ್ಯಕ್ಷರು.—ಮಾನ್ಯ ಸದಸ್ಯರ ಜೊತೆಯಲ್ಲಿ ಮಾನ್ಯ ಸಚಿವರೂ ಹೋಗ ಬೇಕೇನೋ ? ಆಗ ಆವರಿಗೆ ಸಮಾಧಾನವಾಗುತ್ತದೆ. ಅದಕ್ಕೇನು ಮಾಡುವುದು.

BUDGET ESTIMATES FOR 1975—76

(General Discussion)

(Debate Continued)

2-30 P. M.

‡ ‡ಶ್ರೀ ಎ. ಶಂಕರ ಆಳ್ವ (ಪುತ್ತೂರು) :—ಮಾನ್ಯ ಆರ್ಥಿಕ ಸಚಿವರ ಆಯವ್ಯಯ ಪಟ್ಟಿಯನ್ನು ಸಭೆಯ ಮುಂದಿಟ್ಟಿದ್ದಾರೆ. ಇಂಥ ಸಂದರ್ಭದಲ್ಲಿ ಕೆಲವು ಮಾತುಗಳನ್ನಾಡುವುದು ಮತ್ತು ಅವರನ್ನು ಅಭಿನಂದಿಸುವುದು ಸಹಜ. ಏಕೆಂದರೆ ಎಲ್ಲರಿಗೂ ಸಮರ್ಪಕವಾಗುವ ರೀತಿಯಲ್ಲಿ ಬಡ್ಜೆಟ್ಟನ್ನು ಮಂಡಿಸುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ. ಆದರೆ ಬಹಳ ಜಾಗರೂಕತೆಯಿಂದ ಒಳ್ಳೆಯ ರೀತಿಯಲ್ಲಿ ಕೆಲವು ನಿದರ್ಶನಗಳನ್ನು ಕೊಟ್ಟು ಸಮಗ್ರವಾದ ಒಂದು ಪತ್ರವನ್ನಿಟ್ಟಿದ್ದಾರೆಂದು ಹೇಳಲು ಬಯಸುತ್ತೇನೆ. ಈ ಸಂದರ್ಭದಲ್ಲಿ ಕೆಲವು ಸೂಚನೆಗಳನ್ನು ಸಹ ಕೊಡಬೇಕೆಂದಿದ್ದೇನೆ.

ನಿನ್ನೆ ವಿರೋಧ ಪಕ್ಷದ ನಾಯಕರು ಬಡ್ಜೆಟ್ಟಿನ ವಿಷಯದಲ್ಲಿ ಕೆಲವು ಮಾತುಗಳನ್ನಾಡಿದ್ದಾರೆ, ಅವರು ಮಾತನಾಡುವಾಗ ಸ್ವಲ್ಪ ಸಮಯ ಇರಲಿಲ್ಲ, ನಾನಿದ್ದಾಗ ಕೆಲವು ವಿಷಯಗಳನ್ನು ಹೇಳಿದ್ದಾರೆ, ಉಳಿದ ವಿಚಾರಗಳನ್ನು ಪತ್ರಿಕೆಯಲ್ಲಿ ನೋಡಿದೆ. ಅದನ್ನು ನೋಡಿ ಬಹಳ ಮಟ್ಟಿಗೆ ನನಗೆ ಸಮಾಧಾನವಾಗಿದೆ. ಆದರೆ ಮುಖ್ಯವಾಗಿ ಕೇಂದ್ರ ಸರ್ಕಾರದವರು ನಮಗೆ ವಿರೋಧವಾಗಿದ್ದಾರೆ ಮತ್ತು ಸಾಕಷ್ಟು ನಮ್ಮ ನೆರವಿಗೆ ಬರುವುದಿಲ್ಲ ಎಂದು ಹೇಳುವುದು ಸರಿಯಲ್ಲ, ಏಕೆಂದರೆ ಕೇಂದ್ರಕ್ಕೆ ನಮ್ಮ ರಾಜ್ಯವೊಂದೇ ಇಲ್ಲ, ಅನೇಕ ರಾಜ್ಯಗಳು ಸೇರಿವೆ. ಮತ್ತು ಯಾರು ಒಳ್ಳೆಯ ರೀತಿಯಿಂದ ಹಣವನ್ನುಪಯೋಗಿಸುವರೋ ಅಂಥವರಿಗೆ ಹೆಚ್ಚು ಪ್ರಮಾಣದಲ್ಲಿ ಸಹಾಯ ನೀಡವರು ಮತ್ತು ಬಹಳ ಅಗತ್ಯವಿದ್ದ ಕೆಲವು ಸಂದರ್ಭಗಳಲ್ಲಿ ವಿಶೇಷ ರೀತಿಯಲ್ಲಿ ಅವರು ಹಣ ಸಹಾಯ ಮಾಡುವರು. ನಾವೂ ಸಹ ಜಾಗರೂಕರಾಗಿರಬೇಕು. ಏಕೆಂದರೆ ಕಾಳಿನದಿ ವಿಚಾರದಲ್ಲಿ ನಾವು